ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

# ಸಿ. ಸಿ. ಸಂಖ್ಯೆ: 747/2023

ಪಿಡಬ್ಲ್ಯು: - 1

ದಿನಾಂಕ: 23.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ. ಕೆ ಹೆಚ್ ವಿ ರವರಿಂದ:-

ನಾನು ಆರೋಪಿಯ ವಿರುದ್ಧ ಒಟ್ಟು ಮೂರು ಚೆಕ್ ಬೌನ್ಸ್ ಪ್ರಕರಣಗಳನ್ನು ದಾಖಲು ಮಾಡಿದ್ದೇನೆ. ನಾನು ಮೂರು ಪ್ರಕರಣಗಳಿಂದ ಆರೋಪಿಯಿಂದ ಒಟ್ಟು ರೂ.44,76,718/- ಹಾಗೂ 500 ಕೆ ಜಿ ಕರಿಮೆಣಸಿನ ಬಾಪ್ತು ರೂ.5,05,000/-ಹಣವನ್ನು ಕ್ಲೇಮ್ ಮಾಡುತ್ತಿದ್ದೇನೆ. ನೀವು ಮೇಲೆ ಹೇಳಿದ ಹಣವನ್ನು ದಿ:07.05.2022 ರಿಂದ ಸೆಪ್ಟೆಂಬರ್ -2022ರವರೆಗೆ ಆಗಿರುವ ವ್ಯವಹಾರದ ಬಾಪ್ತು ಕ್ಲೇಮ್ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಸೋಮವಾರಪೇಟೆಯ ಎಸ್ ಬಿ ಐ ಬ್ಯಾಂಕಿನಲ್ಲಿ, ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿ ಚಾಲ್ತಿ ಖಾತೆ ಹೊಂದಿದ್ದೇನೆ. 2022-23ರ ನನ್ನ ಬ್ಯಾಂಕ್ ಸ್ಟೇಟ್ಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ವ್ಯವಹಾರದ ಸ್ಪಷ್ಟತೆ ಸಿಗುತ್ತದೆ ಎಂದರೆ ಸರಿ. ಮೇಲೆ ಹೇಳಿದ ನನ್ನ ಎರಡೂ ಬ್ಯಾಂಕ್ ಗಳ ಅಕೌಂಟ್ ಸ್ಟೇಟ್ಮೆಂಟನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಕಾಫಿ ಹಾಗೂ ಕರಿಮೆಣಸನ್ನು ವ್ಯಾಪಾರ ಮಾಡುವವರು ಸದರಿ ವ್ಯಾಪಾರದ ಬಾಪ್ತು ಪ್ರತ್ಯೇಕವಾಗಿ ಅಕೌಂಟನ್ನು ತೆರೆಯಬೇಕು ಎಂದರೆ ಸರಿ. ಮೇಲೆ ಹೇಳಿದ ನಿಗಧಿತ ಅವಧಿಗೆ ಸಂಬಂಧಪಟ್ಟಂತೆ ನಿಮ್ಮ ವ್ಯಾಪಾರದ ಕಂಪನಿ ಅಕೌಂಟನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೇಲೆ ಹೇಳಿದಷ್ಟು ಹಣ ಆರೋಪಿಯಿಂದ ಬರಬೇಕು ಎಂದು ಯಾವ ಆಧಾರದ ಮೇಲೆ ನೀವು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನ್ನ ಬಳಿ ಸೂಕ್ತ ದಾಖಲೆಗಳು ಇವೆ ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ ಎನ್ನುತ್ತಾರೆ. ಚೆಕ್ಕು ಕೊಟ್ಟಿದ್ದಾರೆ ಎಂದು ಹೇಳುವ ದಿನದಿಂದ ಎಷ್ಟು ದಿನಗಳಾದ ಮೇಲೆ ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಚೆಕ್ ಕೊಟ್ಟ ದಿನವೇ ಅಂದರೆ ದಿ: 01.12.2022 ರಂದೇ ಅಗ್ರಿಮೆಂಟನ್ನು ಮಾಡಿಕೊಂಡಿದ್ದೇವೆ. ಆರೋಪಿ ನನಗೆ ಮೂರು ಚೆಕ್ಕುಗಳನ್ನು ಕೊಟ್ಟಿದ್ದರು. ಆರೋಪಿ ಮಾಡಿಕೊಟ್ಟಿದ್ದಾರೆ ಎಂದು ಹೇಳುವ ಒಪ್ಪಂದ ಪತ್ರ ಯಾರ ಬಳಿ ಇದೆ ಎಂದರೆ ಸಾಕ್ಷಿ ನನ್ನ ಬಳಿ ಇದೆ ಎನ್ನುತ್ತಾರೆ. ಸದರಿ ಒಪ್ಪಂದ ಪತ್ರವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಆರೋಪಿ ಸದರಿ ಒಪ್ಪಂದ ಪತ್ರವನ್ನು

ಮಡಿಕೇರಿ ನ್ಯಾಯಾಲಯದ ಬಾರ್ ಅಸೋಸಿಯೇಷನ್ ನಲ್ಲಿ ಮಾಡಿಕೊಟ್ಟಿದ್ದಾರೆ. ಒಪ್ಪಂದ ಪತ್ರದ ಕರಡು ಪ್ರತಿಯನ್ನು ನನ್ನ ಹೆಂಡತಿ ತಯಾರು ಮಾಡಿರುತ್ತಾರೆ. ಸದರಿ ಒಪ್ಪಂದ ಪತ್ರವನ್ನು ಕರಡು ತಯಾರು ಮಾಡಿ ಪರಿಶೀಲಿಸಿದ್ದು ನನ್ನ ವಕೀಲರಾದ ಶ್ರೀ ಡಿ. ಡಿ. ಸಿ. ರವರು. ಸದರಿ ಒಪ್ಪಂದ ಪತ್ರಕ್ಕೆ ನನ್ನ ಹೆಂಡತಿಯಾದ ಹೇಮಲತಾ ಸಿ. ಜಿ. ಮತ್ತು ಮಯೂರು ಎಂ. ಈ. ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ. ಸದರಿ ಒಪ್ಪಂದ ಪತ್ರದ ನಕಲನ್ನು ನಾನು ಆರೋಪಿಗೆ ನೀಡಿಲ್ಲ. ಮೇಲೆ ಹೇಳಿದ ಸಾಕ್ಷಿದಾರರು ಹಾಗೂ ವಕೀಲರನ್ನು ಸಾಕ್ಷಿದಾರರಾಗಿ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ.

(ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.